ಮೈಸೂರ ಗೆಜೆಟ

ಸರ್ಕಾರದಿಂದ ಫಾಯಿಷ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ ತಾ) 21, ಸ್ರ 1889.

ಸೂ॥ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬ್ಯೆ ಇದಕ್ಕೆ ದೇರೆಯಾಗಿ ಪ್ರಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ ಜಡ್ಜೀರು, ವಗ್ಯೆರೇರಿಂದ ಕೊಡ್ಜೋಣಾದ

ಇಸ್ತಿಹಾರ್ನಾಮೆಗಳು.

ಫೈನ್ಯಾಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ವ್ಯಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಆಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬ್ಯೆ ಅವರುಗಳೊಜನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ಪೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್‌ಮೆಂಟ್ ಯಾನೇ ಪರಾ ಬ್ಯೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಪ್ಯೂಟ್ಲಿಕೇಟೂದ ಡಿಮಾಂಡ್ ಡ್ರಾಫಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಂಜ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಜೆಜ್. ಜಡ್ಸನ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ಆಗಸ್ಟ್ 1889.

1878ನೇ ಇಸವಿ ಫಾರೆಸ್ಟ್ ರೂಲ್ಸ್ 9ನೇ ಸೆಕರ್ಷ ಅನುಸರಿಸಿ ತುಮಕೂರು ಡಿಸ್ಟ್ರಿಕ್ಟು ದೇವರಾಯದುರ್ಗ ಸ್ಟೇಟ್ ಫಾರೆಸ್ಟ್‌ಗೆ ಹೊಸದಾಗಿ ಕೇರಿಸಿಕೊಂಡು 22 ಗಜ ಆಗಲ ಡಿಮಾರ್ಕೇಷನ್ ಲೈನ್ ಮಾಡಿರುವ ದೊಡ್ಡವಾಡೀ ಪಟ್ಟಿಪ ಗಡಿಗಳು ಸಕಲಜನರ ತಿಳುವಳಿಕೆ ಬ್ಯೆ ಫಾಯಿಷ ಮಾಡಲ್ಪಟ್ಟಿರುತ್ತೆ.

ಪುತ್ತರಕ್ಕೆ.

ಶೆಂಗ್ರಹಳ್ಳಿ ಗ್ರಾಮದ ಸರ್ವೆ ನಂಬರ್ 21—31—36—39—46 ಮತ್ತು ಬೋಜೇನಹಳ್ಳಿ ಗ್ರಾಮದ 48 ಮತ್ತು 49ನೇ ನಂಬರುಗಳು.

ಪೂರ್ವಕ್ಕೆ.

ಚಕ್ಕ ದೊಡ್ಡವಾಡೀ ಗ್ರಾಮದ ಸರ್ವೆ 18—22—23—24—25—26—29—34—35 ಮತ್ತು ಹಿರೇದೊಡ್ಡವಾಡೀ ಗ್ರಾಮದ ಸರ್ವೆ 83—85—86—87ನೇ ನಂಬರುಗಳು.

ದಕ್ಷಿಣಕ್ಕೆ.

ನಾತಗಟ್ಟ ಗ್ರಾಮದ ಸರ್ವೆ 7—8—10—11 ಮತ್ತು ಪೂರ್ಡಿಗೆರೆ ಗ್ರಾಮದ ಸರ್ವೆ 127—129—132—119—124—125.

ಪಶ್ಚಿಮಕ್ಕೆ.

ಚೇವರಾಯದುರ್ಗ ಫಾರೆಸ್ಟ್ ಡಿವಾರ್ಕೇಷನ್‌ಲೈನ್ ಮತ್ತು ನಾಗೇನಹಳ್ಳಿ ಗ್ರಾಮದ ಸರ್ವೆ 45—47—51—55—58—59—26—27—28—29—41 ವೆಂಕಟನಾಯಕನಪಾಳ್ಯದ ಸರ್ವೆ 1—6—5 ಮತ್ತು ಬೆಳಬಟ್ಟಹಳ್ಳಿ ಗ್ರಾಮದ ಸರ್ವೆ 5—6—9—19—21—22—23—24—29 ಮತ್ತು 30ನೇ ನಂಬರುಗಳು.

ತಾಯಿಪಟ್ಟದ ಸುತ್ತಳತೆ 7¼ ಮೈಲಿಗಳು.

ಯಲ್. ರಿಕ್ಕೆಟ್ಸ್, ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 700.

ಮುಳಬಾಗಲಿನಲ್ಲಿ ಇದ್ದು ಮೃತಪಟ್ಟ ರಾಮಕೊಪ್ಪಂ ಅಂಣಯ್ಯಕೆಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗುರುಮೂರ್ತಿಕೆಟ್ಟಿ, ಮೃತಪಟ್ಟ ಸದರೀ ಅಂಣಯ್ಯಕೆಟ್ಟಿರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳಬಾಗಲು ಸ್ಥಳದ ಗುರುಮೂರ್ತಿ ಕೆಟ್ಟರು ಮುಳಬಾಗಲು ವಾಸಸ್ಥನಾಗಿ ಮೃತಪಟ್ಟ ಅಂಣಯ್ಯಕೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುರುಮೂರ್ತಿಕೆಟ್ಟರ ಅರ್ಜಿಯನ್ನು 1889ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಂಣಯ್ಯಕೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಅರ್ಜೀ ನಂಬರ್ 701.

ತುಮಕೂರಲ್ಲಿ ಇದ್ದು ಮೃತಪಟ್ಟ ಮರಿಬಸವ್ಮನವರ ಸಿದ್ದಲಿಂಗಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಈಶ್ವರಪ್ಪ, ಮೈನರ್ ಗಾರ್ಡಿಯ್ಯ ಗಂಗವ್ಮ, ಮೃತಪಟ್ಟ ಸದರೀ ಸಿದ್ದಲಿಂಗಂಣಗೆ ಮೈನರನು ಮೊಮ್ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ಸ್ಥಳದ ಈಶ್ವರಪ್ಪನ ಗಾರ್ಡಿಯ್ಯ ಗಂಗವ್ಮ, ತುಮಕೂರು ವಾಸಸ್ಥರಾಗಿ ಮೃತಪಟ್ಟ ಸಿದ್ದಲಿಂಗಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗಂಗವ್ಮನ ಅರ್ಜಿಯನ್ನು 1889ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಲಿಂಗಂಣನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಸೆಪ್ಟಂಬರ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೂಡನೆ ಕೊಡೋಣಾಗಿಧೆ.

1889ನೇ ಇಸವಿ ಅರ್ಜೀ ನಂಬರ್ 716.

ಆನೆಕಲ್ಲಿನಲ್ಲಿ ಇದ್ದು ಮೃತಪಟ್ಟ ಪಾರ್ವತೀ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಂಬಿರಪ್ಪ, ಮೃತಪಟ್ಟ ಸದರೀ ಪಾರ್ವತಿ ರಖುವ್ದುದಾರಳು ಆಗಬೇಕೆಂಬ ಹಕ್ಕುದಾರಿ ಮೇಲೆ ಆನೆಕಲ್ ಸ್ಥಳದ ನಗರ್ತರ ಕಂಬಿರಪ್ಪನು ಆನೆಕಲ್ ವಾಸಸ್ಥಳಾಗಿ ಮೃತಪಟ್ಟ ಪಾರ್ವತೀ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಂಬಿರಪ್ಪನ ಅರ್ಜಿಯನ್ನು 1889ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾರ್ವತಿ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಸೆಪ್ಟಂಬರ್ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೂಡನೆ ಕೊಡೋಣಾಗಿಧೆ.

ಎಸ್. ಅನಂತಸ್ವಾಮಿರಾವ್,
ಸಬ್ ಜಡ್ಜ್.